# ಹೀಗೊಂದು ಪ್ರಶ್ನೆ

ಈ ಮಾಯಾ ಪೆಟ್ಟಿಗೆಯಲ್ಲಿ
ಗೂಗಲ್‌ಮಾಮ ಇದ್ದಾನಂತೆ
ಜಗತ್ತಿನಲ್ಲೇ ಅವನು ಬಹಳ ಬುದ್ಧಿವಂತನಂತೆ
ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡುವನಂತೆ
ಅವನಿಗೆ ತಿಳಿಯದೇ ಇರುವುದು
ಏನೂ ಇಲ್ಲವಂತೆ.

ಬನ್ನಿ ಸ್ನೇಹಿತರೇ ನಾವೂ
ಗೂಗಲ್‌ಮಾಮನ ಕೇಳೋಣ
ನಮ್ಮ ಬಡತನ ನಿವಾರಿಸೋ
ಉಪಾಯ ತಿಳಿಯೋಣ
ಈ ಪ್ರಪಂಚದ ಜನರಲ್ಲಿ ಏಕೀ ತಾರತಮ್ಯ
ನಮಗೂ ಇಲ್ಲವೇ ಆಸೆ, ಆಕಾಂಕ್ಷೆ ಅದಮ್ಯ.

ನಾವೂ ಆ ದೇವರ ಮಕ್ಕಳಲ್ಲವೇ?
ಹಸಿವು ನೀರಡಿಕೆ
ನಮಗೂ ಕಾಡುವುದಿಲ್ಲವೇ?
ಅವರಿಗೆಲ್ಲಾ ಸಿಗುವುದು ಬಗೆಬಗೆಯ ತಿಂಡಿ
ನಮಗೆ ದುಸ್ತರ ಇಂದಿನ ಗಂಜಿ.

ಮಾಸಿದ ಉಡುಪು ತೊಟ್ಟು
ಕೂತಿರುವೆವು ತಯಾರಾಗಿ
ಬೂಟು ಹಾಕಿ
ನಾವೂ ಶಾಲೆಗೆ ಹೋಗಿ
ಆಗಬೇಕು ವಿದ್ಯಾವಂತ
ಹಣ ಸಂಪಾದಿಸಿ, ಬಡತನ ನೀಗಿಸಿ ಶ್ರೀಮಂತ.

ಇರುವುದೇ ಗೂಗಲ್‌ಮಾಮ
ನಿನ್ನ ಬಳಿ ಈ ಪ್ರಶ್ನೆಗೆ ಉತ್ತರ
ಸಿಗುವುದೇ ಉಪಾಯ ನೀಗಿಸಲು
ಈ ಬಡತನ ಸಿರಿತನದ ಅಂತರ.
ಯಾಕಾದಿ ಗೂಗಲ್‌ಮಾಮ ನಿರುತ್ತರ
ನಮಗೆ ಏಕೀ ಬಡತನದ ಬಾಳು ನಿರಂತರ?

**● ಅನಿತಾ ಪೈ**



# ಕೀಲಿ ಕೈ

ಪುಟ್ಟ ಕೈಯೊಳಗೆ ಬಿಚ್ಚಿಕೊಂಡಿದೆ
ಅದಾವುದೋ ಬೆರಗಿನ ಲೋಕ
ತೆರೆದಷ್ಟೂ ಬಾಗಿಲುಗಳು
ಬೆರಳಂಚಿನಲ್ಲಿಯೇ ಇದೆ ಕೀಲಿ ಕೈ

ನೆಟ್ಟ ಕಣ್ಣುಗಳ ಸೆಳೆಯುತಿದೆ
ಕೊನೆಯಿಲ್ಲದ ಮಾಯೆ
ಬೆಂಬತ್ತಿ ಮುಂದೆ ಮುಂದೆ
ಓಡುತಿದೆ ನೋಟ

ಆಳ ಕಾಣದ ಕೊಳದೊಳಗೆ
ಇಣುಕಿ ನೋಡುವ ಭರದಲಿ
ಮುಳುಗಿ ಹೋಗಿದೆ ಮನಸು

ಅರಿವಿಲ್ಲದೆ
ಮುಚ್ಚಿಕೊಂಡಿದೆ ಬೆನ್ನ ಹಿಂದೆ
ಬಾಲ್ಯದ ಮುದ್ದು ಬಾಗಿಲು
ಛೇ!... ಕಳೆದು ಹೋಯಿತೇ ಕೀಲಿ ಕೈ!

**● ಚಂದ್ರಿಕಾ ಹೆಗಡೆ**